ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

# ಕೃಷಿ ಮಾರಾಟ ಮಾಹಿತಿಯ ಆಧುನಿಕ ಆಯಾಮಗಳು

ಸಂಗ್ರಹಣೆ :

ಡಾ. ಸಿ. ಬಿ. ಕೌಜಲಗಿ

ಡಾ. ತನ್ವೀರ್ ಅಹ್ಮದ್

ಡಾ. ಶ್ರೀಪಾದ ವಿಶ್ವೇಶ್ವರ

ಡಾ. ಸಚಿನ್ ನಂದಿಮಠ



ಕೃಷಿ ಅರ್ಥಶಾಸ್ತ್ರ ವಿಭಾಗ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೂಟ–587103

# ಕೃಷಿ ಮಾರಾಟ ಮಾಹಿತಿಯ ಆಧುನಿಕ ಆಯಾಮಗಳು

ಕೃಷಿ ಲಾಭದಾಯಕವಾಗಬೇಕಾದರೆ, ಕೃಷಿಕರು ಕೃಷಿ ಉತ್ಪಾದನೆಗೆ ಒತ್ತು ನೀಡುವುದರ ಜೊತೆಗೆ, ವ್ಯಾಪಾರಿ ಮನೋಭಾವ ಬೆಳೆಸಿಕೊಳ್ಳವುದು ಸೂಕ್ತ. ಮಾರುಕಟ್ಟೆಯನ್ನು ಗುರಿಯಾಗಿಸಿಕೊಂಡು ಉತ್ಪಾದನೆ ಮಾಡುವ ಕಾಲ ಇದಾಗಿದೆ. ರೈತರು ತಮಗೆ ಸಮೀಪದ ಮಾರುಕಟ್ಟೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಉತ್ಪಾದನೆಗೆ ತೊಡಗದೆ, ದೇಶದ ಉದ್ದಗಲಕ್ಕೂ ಹರಡಿರುವ ಕೃಷಿ ಮಾರುಕಟ್ಟೆಗಳಲ್ಲಿ ಉತ್ಪಾದಿಸಿದ ವಸ್ತುಗಳಿಗೆ ಸಿಗಬಹುದಾದ ಕನಿಷ್ಠ, ಗರಿಷ್ಠ, ಮಾದರಿ ಬೆಲೆಗಳು, ಆಮದು–ರಫ್ತು, ವಿದೇಶ ಮಾರುಕಟ್ಟೆಗಳ ಸ್ಥಿತಿ–ಗತಿ ಇತ್ಯಾದಿ ಚಿತ್ರವನ್ನು ತಿಳಿದುಕೊಂಡು ಉತ್ಪಾದನೆ ಮಾಡುವುದು ಅವಶ್ಯಕ. ಈ ಎಲ್ಲಾ ಮಾಹಿತಿಯನ್ನು ಈ ಕೆಳಕಂಡ ಪ್ರಮುಖ ಅಂತರ್ಜಾಲ ತಾಣಗಳಿಂದ ಪಡೆಯಬಹುದು.

ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ಪ್ರಮುಖ ಅಂತರ್ಜಾಲ ತಾಣಗಳು

**http://krishimaratavahini.kar. nic.in :** ಕರ್ನಾಟಕದ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕೃಷಿ ಹುಟ್ಟುವಳಿಗಳ ದೈನಂದಿನ ಬೆಲೆಗಳು, ಆಯ್ದ ಪ್ರಮುಖ ಮಾರುಕಟ್ಟೆಗಳಲ್ಲಿನ ಹುಟ್ಟವಳಿಗಳ ಸವಿಸ್ತಾರ ಮಾಹಿತಿಯನ್ನು ಒದಗಿಸುತ್ತದೆ.

**http://www.agriwatch.com :** ಇದು ದೇಶದ ಸುಮಾರು 200 ಪ್ರಮುಖ ಮಾರುಕಟ್ಟೆಗಳಲ್ಲಿ ಅನೇಕ ಕೃಷಿ ಮತ್ತು ಜಾನುವಾರು ಉತ್ಪನ್ನಗಳ ದೈನಂದಿನ ಆವಕಗಳು ಮತ್ತು ಧಾರಣೆಗಳನ್ನು ಉಚಿತವಾಗಿ ಪ್ರದರ್ಶಿಸುತ್ತದೆ. ಆದರೆ, ಹವಾಮಾನ ವರದಿ ಮತ್ತು ಆಯ್ದ ಉತ್ಪನ್ನಗಳ ಮೇಲೆ ನಡೆದ ಅಧ್ಯಯನಗಳನ್ನು ನಿಗದಿತ ಹಣ ಪಾವತಿ ಮಾಡಿದ ನಂತರ ಮಾತ್ರ ಪ್ರದರ್ಶಿಸುತ್ತದೆ.

**http://agmarknet.nic.in :** ದೇಶದ ಸುಮಾರು 280 ಪ್ರಮುಖ ಮಾರುಕಟ್ಟೆಗಳ, ಮಾರುಕಟ್ಟೆವಾರು, ಹುಟ್ಟುವಳಿವಾರು, ದೈನಂದಿನ, ವಾರದ ಮತ್ತು ಮಾಸಿಕ ಬೆಲೆಗಳು, ಆವಕಗಳು ಇವುಗಳ ಬಗ್ಗೆ ಮಾಹಿತಿ. ಇದಲ್ಲದೆ ಅಂತರಾಷ್ಟ್ರೀಯ ಬೆಲೆಗಳು, ರಫ್ತು ಮತ್ತು ಆಮದು ಬಗ್ಗೆ ಮಾಹಿತಿ ಲಭ್ಯವಾಗುತ್ತದೆ.

**http://raitamitra.kar.nic.in :** ರೈತರಿಗೆ ಸಲಹೆಗಳು, ಬೀಜ–ರಾಸಾಯನಿಕ ಗೊಬ್ಬರಗಳ ಸ್ಥಿತಿ–ಗತಿ, ಹುಟ್ಟುವಳಿ ಬೆಲೆ ಮತ್ತು ಹವಾಮಾನದ ಬಗ್ಗೆ ಮಾಹಿತಿ, ಕೃಷಿ ಅಂಕಿ–ಅಂಶಗಳು ಲಭ್ಯ.

**http://apeda.com :** ನಮ್ಮ ದೇಶದಿಂದ ಕೃಷಿ ಹುಟ್ಟುವಳಿಗಳ ರಫ್ತು ಮತ್ತು ಆಮದುದಾರರ ಸೂಚಿ, ರಫ್ತು ಮತ್ತು ಆಮದಿನ ಸ್ಥಿತಿ–ಗತಿ , ಅಂತರಾಷ್ಟ್ರೀಯ ಬೆಲೆಗಳ ಮಾಹಿತಿ ಹಾಗೂ ವಿವಿಧ ಕೃಷಿ ಉತ್ಪನ್ನಗಳಿಗೆ ಇರಬೇಕಾದ ಗುಣಮಟ್ಟದ ಮಾನದಂಡಗಳನ್ನು ಇಲ್ಲಿ ನೀಡಲಾಗುತ್ತದೆ.

**http://agricoop.nic.in :** ಕೃಷಿ ಹುಟ್ಟುವಳಿಗಳ ಕನಿಷ್ಠ ಬೆಂಬಲ ಬೆಲೆ, ಸಾವಯವ ಕೃಷಿ, ಜೈವಿಕ ತಾಂತ್ರಿಕತೆ, ಬೆಳೆಗಳ ಚಲನೆಯ ರೀತಿ ಇತ್ಯಾದಿ ಮಾಹಿತಿ ಲಭ್ಯವಾಗುತ್ತದೆ.

**http:// www.fao.org :** ಜಾಗತಿಕ ಮಟ್ಟದ ಕೃಷಿಯ ಮುಖ್ಯ ವಿಷಯಗಳ ಮಾಹಿತಿ ಲಭ್ಯವಾಗುತ್ತದೆ.

**http://www.wto.org :** ಜಾಗತಿಕ ವ್ಯಾಪಾರ ಸಂಸ್ಥೆ (ಡಬ್ಲ್ಯು.ಟಿ.ಓ) ಮತ್ತು ಜಾಗತಿಕ ವ್ಯಾಪಾರ ಒಪ್ಪಂದಗಳ ಬಗ್ಗೆ ಮಾಹಿತಿ

**http://dacnet.nic.in/cacp :** ಭಾರತ ಸರಕಾರದ ಕೃಷಿ ಖರ್ಚು ಹಾಗೂ ಬೆಲೆಗಳ ಆಯೋಗ (commission for Agricultural Costs and prices) ದಿಂದ ರಚಿಸಲ್ಪಟ್ಟ ತಾಣ ಇದಾಗಿದೆ. ಇಲ್ಲಿ ಕನಿಷ್ಠ ಬೆಂಬಲ ಬೆಲೆಗಳನ್ನು ನಿರ್ಧರಿಸುವ ವಿಧಾನಗಳ ಪರಿಚಯವಾಗುತ್ತದೆ ಮತ್ತು ಸರಕಾರದ ಬೆಲೆ ನೀತಿಯ ವರದಿಗಳೂ ಇಲ್ಲಿ ಲಭ್ಯವಾಗುತ್ತದೆ.

**http://www.nhb.gov.in :** ಇದು ರಾಷ್ಟ್ರೀಯ ತೋಟಗಾರಿಕಾ ಮಂಡಳಿಗೆ ಸಂಬಂದಿಸಿದ ಅಂತರ್ಜಾಲ ತಾಣವಾಗಿದೆ. ತೋಟಗಾರಿಕಾ ಮಂಡಳಿಯ ಯೋಜನೆಗಳ ಮಾಹಿತಿ, ತೋಟಗಾರಿಕಾ ಬೆಳೆಗಳ ಕ್ಷೇತ್ರ, ಅವುಗಳ ಉತ್ಪಾದನೆಯ ಮಾಹಿತಿ, ಮಾರುಕಟ್ಟೆಯಲ್ಲಿ ಅವುಗಳ ಆವಕದ ಪ್ರಮಾಣ, ಬೆಲೆಗಳ ಮಟ್ಟ, ಯೋಜನೆಗಳ ಅಡಿಯಲ್ಲಿ ಸಿಗುವ ಹಣಕಾಸು ಸೌಲಭ್ಯ- ಮುಂತಾದ ವಿವರಗಳನ್ನು ಇಲ್ಲಿಂಥ ಪಡೆಯಬಹುದು.

**http://www.nhm.nic.in :**ರಾಷ್ಟ್ರೀಯ ತೋಟಗಾರಿಕೆ ಮಿಶ್‌ನ್‌ದ ಧ್ಯೇಯ, ಇದರ ವ್ಯಾಪ್ತಿಯಲ್ಲಿ ಬರುವ ಬೆಳೆಗಳ ಹಾಗೂ ಜಿಲ್ಲೆಗಳ ವಿವರ ಇಲ್ಲಿ ದೊರೆಯುತ್ತದೆ.

**http://aicofindia.org :** ಇದು ಭಾರತ ಸರಕಾರದ ಕೃಷಿ ವಿಮೆಗೆ ಸಂಬಂದಿಸಿದ ಒಂದು ಪ್ರಮುಖ ಅಂತರ್ಜಾಲ ತಾಣವಾಗಿದೆ. ಇಲ್ಲಿ ಬೆಳೆ ವಿಮೆ, ಹವಾಮಾನ, ಜಾನುವಾರು ವಿಮೆ ಮುಂತಾದವುಗಳ ಸಮಗ್ರ ಮಾಹಿತಿ ಲಭ್ಯವಾಗುತ್ತದೆ.

**http://ofai.org :** ಭಾರತದ ಸಾವಯವ ಕೃಷಿ ಸಂಘದ ಅಂತರ್ಜಾಲ ತಾಣ ಇದಾಗಿದೆ. ಇಲ್ಲಿ ಸಾವಯವ ಕೃಷಿಗೆ ಸಂಬಂದಿಸಿದ ಉಪಯುಕ್ತ ಮಾಹಿತಿ ಲಭ್ಯವಾಗುತ್ತದೆ. ಉದಾಹರಣೆಗೆ ಮಾದರಿ ಸಾವಯವ ಕೃಷಿ ಫಾರ್ಮಗಳ ಮಾಹಿತಿ, ಸಾವಯವ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ಟೋರಗಳ ಮಾಹಿತಿ ಮುಂತಾದವನ್ನು ಇಲ್ಲಿ ಪಡೆಯಬಹುದು.

**http://www.indocert.org :** ಇದು indocert ಎಂಬ ಸಂಸ್ಥೆಯ ತಾಣವಾಗಿದೆ. ಇದು ಸಾವಯವ ಕೃಷಿ ಉತ್ಪನ್ನವನ್ನು ಪ್ರಮಾಣಿಕರೀಸುವ ಒಂದು ಸಂಸ್ಥೆಯಾಗಿದ್ದು ಭಾರತ ಸರಕಾರದಿಂದ ಮಾನ್ಯತೆ ಪಡೆದಿದೆ. ಸಾವಯವ ಪ್ರಮಾಣಪತ್ರ ಪಡೆಯುವ ಕುರಿತಾದ ಎಲ್ಲ ವಿವರಗಳು ಇಲ್ಲಿ ಸಿಗುತ್ತವೆ.

**http://www.apeda.com/organic/agencies.html :** ಈ ತಾಣದಲ್ಲಿ ಸಾವಯವ ಕೃಷಿಯನ್ನು ಪ್ರಮಾಣೀಕರಿಸಿ ಪ್ರಮಾಣಪತ್ರ ಕೊಡುವ ಹಲವಾರು ಸಂಸ್ಥೆಗಳ ಹೆಸರುಗಳು ಹಾಗೂ ವಿವರಗಳಿವೆ.

**http://www.ncedex.com : http://www.mcxindia.com, http://www.nmce.com :** ಈ ಮೂರು ಅಂತರ್ಜಾಲ ತಾಣಗಳು ಭಾರತದ ರಾಷ್ಟ್ರ ಮಟ್ಟದಲ್ಲಿಯ ವಾಯದೆ ಮಾರುಕಟ್ಟೆಗಳಿಗೆ ಸಂಬಂದಿಸಿದವುಗಳಾಗಿವೆ. ಈ ಪ್ರಮುಖ ವಾಯದೆ ಮಾರುಕಟ್ಟೆಗಳಲ್ಲಿ ಮಾರಾಟವಾಗುವ ಕೃಷಿ ಹಾಗೂ ಕೃಷಿಯೇತರ ಉತ್ಪನ್ನಗಳ ವಿವರವಾದ ಮಾಹಿತಿ ಇಲ್ಲಿ ದೊರೆಯುತ್ತದೆ. ವಾಯದೆ ವ್ಯವಹಾರಗಳಿಗೆ ಸಂಬಂದಿಸಿದ ಹಲವಾರು ವಿಧದ ಪ್ರಶ್ನೆಗಳಿಗೆ ಇಲ್ಲಿ ಸಮಾಧಾನಕರವಾದ ಉತ್ತರಗಳು ಸಿಗುತ್ತವೆ. ಪ್ರತಿ ದಿನ ಪ್ರಚಲಿತವಿರುವ ವಾಯದೆ ಮಾರುಕಟ್ಟೆಗಳ ಬೆಲೆಗಳನ್ನು ಇಲ್ಲಿಂದ ಪಡೆಯಬಹುದು.

**http://www.fmc.gov.in :** ಇದು ಭಾರತ ಸರಕಾರದ ಒಂದು ಅಂತರ್ಜಾಲವಾಗಿದೆ. ವಾಯದೆ ಮಾರುಕಟ್ಟೆಗಳನ್ನು ನಿಯಂತ್ರಿಸುವಲ್ಲಿ forward market commission ಯಾವ ರೀತಿ ಕಾರ್ಯ ನಿರ್ವಹಿಸುತ್ತಿದೆ ಎಂಬುದುರ ಮಾಹಿತಿಯನ್ನು ಇಲ್ಲಿಂದ ಪಡೆಯಬಹುದು. ದೇಶದಲ್ಲಿಯ ಮೂರು ರಾಷ್ಟ್ರಮಟ್ಟದ ವಾಯದೆ ಮಾರುಕಟ್ಟೆಗಳು ಹಾಗೂ 19 ಪ್ರಾಂತೀಯ ಮಾರುಕಟ್ಟೆಗಳ ವಿವರಗಳನ್ನು ಈ ತಾಣದಿಂದ ಪಡೆಯಬಹುದಾಗಿದೆ.

**http://www.cmie.com**

**Centre for Monitoring Indian Economy Pvt. Ltd :** ಈ ಅಂತರ್ಜಾಲ ತಾಣವು ಹಲವು ವಿಧದ ಮಾಹಿತಿಗಳ ಆಗರವಾಗಿದೆ. ರಾಷ್ಟ್ರೀಯ ಆದಾಯ, ಅಂತರಾಷ್ಟ್ರೀಯ ವ್ಯವಹಾರ ಕೃಷಿಯ ಸ್ಥಿತಿ- ಗತಿ, ಬೆಲೆಗಳ ಸ್ಥಿತಿ-ಗತಿ, ವಿವಿಧ ಉದ್ದಿಮೆಗಳಿಗೆ ಸಂಬಂಧಿಸಿದ ಬೇಡಿಕೆ ಹಾಗೂ ಪೂರೈಕೆ ಪ್ರಮಾಣ, ಔದ್ಯಮಿಕ ಸ್ಥಿತಿ-ಗತಿ, ಅವುಗಳ ಮುನ್ನೋಟ ಮುಂತಾದವುಗಳ ವಿವರಣೆ ಇಲ್ಲಿ ದೊರಕುತ್ತದೆ. ಕೃಷಿಗೆ ಸಂಬಂದಿಸಿದಂತೆ, ಕೃಷಿ ಉತ್ಪಾದನೆಯ ಕ್ಷೇತ್ರ, ಉತ್ಪಾದನೆಯ ಪ್ರಮಾಣ, ಇಳುವರಿ, ಕೃಷಿ ಕಚ್ಚಾ ವಸ್ತುಗಳಾದ ರಸಗೊಬ್ಬರ, ಬೀಜ, ಮುಂತಾದವುಗಳ ಮಾಹಿತಿ,

ಮಳೆಯ ಪ್ರಮಾಣ ಮುಂತಾದವುಗಳನ್ನು ಇಲ್ಲಿಂದ ಪಡೆಯಬಹುದು. ಈ ಎಲ್ಲ ಮಾಹಿತಿ ದೇಶದ ಎಲ್ಲ ರಾಜ್ಯಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಸಿಗುತ್ತದೆ. ಈ ಸೇವೆಯನ್ನು ನಿರ್ದಿಷ್ಟ ಶುಲ್ಕವನ್ನು ಪಾವತಿಸಿ ಪಡೆಯಬೇಕು.

**http://www.ncdexspot.com; & http://www.nationalspotexchange.com :** ಇವೆರಡು ತಕ್ಷಣ ಮಾರಾಟಕ್ಕೆ ಸಂಭಂಧಿಸಿದ ಅಂತರ್ಜಾಲ ತಾಣಗಳು. ಇಲ್ಲಿ ತಕ್ಷಣ ಮಾರಾಟದ ಅರ್ಥ ವಿವರಣೆ, ಅದರ ಲಾಭ, ಅಲ್ಲಿ ಮಾರಾಟವಾಗುವ ಉತ್ಪನ್ನಗಳ ವಿವರ ಹಾಗೂ ಬೆಲೆಗಳ ಮಾಹಿತಿ ಸಿಗುತ್ತದೆ.

**ಕೃಷಿ ಹುಟ್ಟುವಳಿಗಳ ಮಾರಾಟಕ್ಕೆ ಪೂರಕ ಸಂಸ್ಥೆಗಳು**

- ರಬ್ಬರ್ ಮಂಡಳಿ, ಸಬ್–ಜೈಲ್ ರೋಡ್, ಪಿ.ಬಿ.ನಂ 1122, ಕೊಟ್ಟಾಯಂ, ಕೇರಳ – 686002 ದೂರವಾಣಿ : (91)481–571231, 571232, 571235, ಫ್ಯಾಕ್ಸ್ : (91)481–571380 ಇ–ಮೇಲ್ : rbktm@kar.nic.in website : http://rubberboard.org.in
- ಕಾಫಿ ಮಂಡಳಿ, ಅಂಬೇಡ್ಕರ ಬೀದಿ, ಬೆಂಗಳೂರು – 560 001 ದೂರವಾಣಿ : 080– 2257890, ಫ್ಯಾಕ್ಸ್ : 080 – 2255557 ಇ–ಮೇಲ್ : cofboard@vsnl.com website : http://www.indiacoffee.org
- ಟೀ ಮಂಡಳಿ, 14, ಬಿಟಿಎಮ್ ಸರಾನಿ ಬ್ರಾಬೊರ್ನೆ ರೋಡ್, ಪಿ.ಬಿ.ನಂ. 2172 ಕಲ್ಕತ್ತಾ – 700001, ದೂರವಾಣಿ : 033–2251411, ಫ್ಯಾಕ್ಸ್ : 033–2251417 website : http://www.indiateaportal.com
- ತಂಬಾಕು ಮಂಡಳಿ, ಪಿ.ಬಿ. ನಂ. 322, ಜಿ.ಟಿ. ರೋಡ್, ಗುಂಟೂರ – 522004, ದೂರವಾಣಿ : 0863 – 2358399, 2358499, 2327550, ಫ್ಯಾಕ್ಸ್ : 0863 – 2354232 ಇ–ಮೇಲ್ : info@indiantobacco.com website : http://www.indiantobacco.com
- ಸಾಂಬಾರು ಮಂಡಳಿ (ವಲಯ ಕಚೇರಿ), 22/1, ಗೆಸ್ಟ್ ಹೌಸ್ ರೋಡ್ ಬೆಂಗಳೂರು – 560 001 ದೂರವಾಣಿ : 080 – 25320354, ಇ–ಮೇಲ್ : spicesboard@vsnl.com website : http://www.indianspices.com
- ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (APEDA) ನಂ. 12/1/1, ಪ್ಯಾಲೇಸ್ ಕ್ರಾಸ್ ರೋಡ್, ಬೆಂಗಳೂರು – 560 020 ದೂರವಾಣಿ : 080 – 23343425 / 23368272, ಫ್ಯಾಕ್ಸ್ : 080–23364560 ಇ–ಮೇಲ್ : apedabr@vsnl.net
- ಮೀನುಗಾರಿಕೆ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (MPEDA) ಮ.ನಂ. 131–15, ವಾರ್ಡನಂ. 13, ಮೊದಲನೆಯ ಮಹಡಿ, ಕಿಲ್ಲೆ ಕೋರ್ಟ್ ಪಂಜೆ ಮಂಗೇಶರಾವ ರೋಡ್, ಹಂಪನಕಟ್ಟಾ, ಮಂಗಳೂರು. ದೂರವಾಣಿ:0824–2440360, ಫ್ಯಾಕ್ಸ್:0824–2440360 ಇ–ಮೇಲ್: mngmpeda@sancharnet.in